ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ

ನ್ಯಾಯಾಲಯ, ಕನಕಪುರ.

**ಸಿ. ಸಿ. ಃ 1105/2014**

ದೋಷರೋಪಣೆ

ಕು. ಪಾರ್ವತಿ, ಬಿ.ಎ.ಎಲ್, ಎಲ್.ಎಲ್.ಬಿ. ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಧೀಶರು,ಕನಕಪುರ , ಆದ ನಾನು ಈ ಕೆಳಗಿನ ಆರೋಪಿತರಾದ

1. ಶಿವಾಜಿ ಉಃ ಪುಚಿ
   ಬಿನ್ ಲೇಟ್ ನಂಜುಡಂರಾವ್
   ವಯಸ್ಸು 30 ವರ್ಷಗಳು,

2. ಪುಟ್ಟರಾಮು ಉಃ ಟೈಲ್ಸ್ ಗೋಪಿ (Split-up)
   ಬಿನ್ ವೆಂಕಟರಾಮಯ್ಯ
   ವಯಸ್ಸು 30 ವರ್ಷಗಳು,

3. ತಾರೇಶ್ ಬಿನ್ ನರಸಿಂಹಯ್ಯ (Split-up)
   ವಯಸ್ಸು 32 ವರ್ಷಗಳು,

   ಮೇಲ್ಕಂಡ ಆರೋಪಿತರ ವಾಸಃ
   ಮಹಾರಾಜರಕಟ್ಟೆ ಗ್ರಾಮ
   ಕನಕಪುರ ಟೌನ್,
   ಕನಕಪುರ ತಾಲ್ಲೂಕು

**ಎಂಬ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪವೇನೆಂದರೆಃ-**

ಕನಕಪುರ ಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದಿನಾಂಕ.**12.06.2013** ರಂದು ರಾತ್ರಿ ಸುಮಾರು **2ಃ30** ಗಂಟೆ ಸಮಯದಲ್ಲಿ ಕನಕಪುರ ತಾಲ್ಲೂಕು, ಕನಕಪುರ ಟೌನಿನ ಮಹಾರಾಜಕಟ್ಟೆಯ ಚಾಸಾ-**1** ರಾಜೇಶ್ ನಾಯಕ್ ರವರ ಮನೆಯ ದನದ ಕೊಟ್ಟಿಗೆಯಲ್ಲಿ ಚಾಸಾ-**1** ರವರು ತಮ್ಮ **8** ತಿಂಗಳ ಗರ್ಭಿಣಿ ಹಸುವನ್ನು ಕಟ್ಟಿ ಹಾಕಿದ್ದಾಗ **1** ನೇ ಆರೋಪಿಯಾದ ನೀವು **2** ಮತ್ತು **3** ನೇ ಆರೋಪಿಗಳೊಂದಿಗೆ ಸೇರಿಕೊಂಡು ಸಮಾನ ಉದ್ದೇಶದಿಂದ ಹಳೆಯ ದ್ವೇಷದಿಂದ ಚಾಸಾ-**1** ರವರ ಗರ್ಭಿಣಿ ಹಸುವಿನ ಹೊಟ್ಟೆಗೆ ದೊಣ್ಣೆಗಳಿಂದ ಹೊಡೆದಾಗ ಹಸು ಕೆಳಕ್ಕೆ ಬಿದ್ದು ಗಾಯಗೊಂಡಿದ್ದು,

ನಂತರ ಹಸುವಿನ ಚಿಕಿತ್ಸೆ ಕೊಡಿದರೂ ಚಿಕಿತ್ಸೆ ಫಲಕಾರಿಯಾಗದೇ ಚಾಸಾ-1 ರವರಿಗೆ ಸೇರಿದ ಹಸು ದಿನಾಂಕ.14.06.2013 ರಂದು ಮೃತಪಟ್ಟಿದ್ದು, ಆ ಮೂಲಕ ತಾವು ಕಿಡಿಗೇಡಿತನದಿಂದ ನಷ್ಟವನ್ನುಂಟು ಮಾಡುವ ಮೂಲಕ ಭಾರತ ದಂಡ ಸಂಹಿತೆ ಕಲಂ 429 ಸಹವಾಚಕ 34 ರಂತೆ ದಂಡಿಯ ಆಪರಾದವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುವೀರಿ.

ಮೇಲಿನ ಆಪಾದನೆಯು ಈ ನ್ಯಾಯಾಲಯದ ಸಂಜ್ಞೆದೊಳಗೆ ಬರುತ್ತಿದ್ದು, ಆ ಕಾರಣ ನಿಮ್ಮನ್ನು ಮೇಲ್ಕಂಡ ಆಪಾದನಾ ವಿಚಾರಣೆಗೆ ಗುರುಪಡಿಸಿದ್ದೇನೆ.

ಮೂರನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕನಕಪುರ

# ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ.

ಸಿ.ಸಿ. ನಂ.1105/2014

| | | | |
|---|---|---|---|
| ಕನಕಪುರ ಪುರ ಪೊಲೀಸ್ ಠಾಣೆ | ವಿರುದ್ಧ | 1. | ಶಿವಾಜಿ ಉಃ ಪುಚಿ<br>ಬಿನ್ ಲೇಟ್ ನಂಜುಡಂರಾವ್<br>ವಯಸ್ಸು 30 ವರ್ಷಗಳು, |

:: ಆಪಾದನೆ ::

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

   ಉತ್ತರಃ-

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

   ಉತ್ತರಃ-

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ತಿಳಿಯುವಂತೆ ಆತನ ಭಾಷೆಯಲ್ಲಿ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸಿರುತ್ತೇನೆ.

ಮೂರನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕನಕಪುರ

ಆರೋಪಿತರ ಸಹಿ